

## ಸೈಕಲ್‌ಗೆ ಲಾಕ್

ಚಿಕ್ಕ ಹುಡುಗನೊಬ್ಬ ಸೈಕಲ್‌ನಲ್ಲಿ ವಿಧಾನಸೌಧದ ಎದುರಿನ ರಸ್ತೆಯಲ್ಲಿ ಹೋಗುತ್ತಿದ್ದ. ಅದರ ಎದುರೇ ಅವನ ಸೈಕಲ್ ಪಂಕ್ಚರ್ ಆಯಿತು. ಸೈಕಲನ್ನು ಅಲ್ಲೇ ನಿಲ್ಲಿಸಿ ಅಪ್ಪನಿಗೆ ಹೇಳಲು ಮನೆ ಕಡೆ ಹೊರಟ. ಇದನ್ನು ನೋಡಿದ ಪೊಲೀಸ್ ಆತನನ್ನು ಅಡ್ಡಗಟ್ಟಿ, 'ಮರೀ ಇದು ವಿಧಾನಸೌಧದ ಎದುರಿನ ರಸ್ತೆ. ಇಲ್ಲಿ ಶಾಸಕರು, ಸಚಿವರು, ಮಂತ್ರಿಗಳು ಓಡಾಡ್ತಾರೆ. ಇಲ್ಲಿ ಸೈಕಲ್ ನಿಲ್ಲಿಸಬಾರದು' ಎಂದ. ಚಿಕ್ಕ ಬಾಲಕ, 'ಪರವಾಗಿಲ್ಲ ಬಿಡಿ ಸಾರ್, ನಾನು ಸೈಕಲ್‌ಗೆ ಲಾಕ್ ಹಾಕಿದ್ದೀನಿ!'ಎಂದ!

**ಜಗದೀಶ ಎಂ. ಸಂಗಣ್ಣವರ**

## ಬೆಕ್ಕು ಹೇಗೆ ಸತ್ತಿತ್ತು

ಸರ್ದಾರ್‌ಜಿ ಮನೆಯ ಬೆಕ್ಕು ಸತ್ತು ಹೋಯಿತು. ತನ್ನ ಮುದ್ದಿನ ಬೆಕ್ಕು ಸತ್ತು ಹೋಗಿದ್ದಕ್ಕೆ ಬೇಸರಗೊಂಡ ಸರ್ದಾರ್‌ಜಿ ಹೆಂಡತಿ ಬಳಿ ಅದು ಹೇಗೆ ಸತ್ತಿತ್ತು ಎಂದು ಕೇಳಿದ. ಸರ್ದಾರ್‌ಜಿ ಹೆಂಡತಿ ಹೇಳಿದಳು,'ಅದರ ಚರ್ಮ ಕೊಳಕಾಗಿದ್ದರಿಂದ ಅದಕ್ಕೆ ಬೆಳಿಗ್ಗೆ ಸ್ನಾನ ಮಾಡಿಸಿದೆ' ಎಂದಳು.
'ಸ್ನಾನ ಮಾಡಿಸಿದರೆ ಬೆಕ್ಕು ಸಾಯುತ್ತದಾ?' ಎಂದು ಹೆಂಡತಿಯನ್ನು ಸರ್ದಾರ್ ಕೇಳಿದ.
'ಸ್ನಾನ ಮಾಡಿಸಿದ ಮೇಲೆ ಬೇಗ ಒಣಗಲಿ ಎಂದು ಬೆಕ್ಕನ್ನು ಹಿಂಡಿದೆ. ಹಾಗೆ ಮಾಡಿದ ಹತ್ತೇ ನಿಮಿಷಕ್ಕೆ ಬೆಕ್ಕು ಸತ್ತಿತ್ತು' ಎಂದು ಅವನ ಹೆಂಡತಿ ಸ್ನಾನ ಮಾಡಿಸಿದ ರೀತಿಯನ್ನು ಹೇಳಿದಳು.
ಅವಳ ಮಾತು ಕೇಳಿ ಸರ್ದಾರ್ ಮೂರ್ಛೆ ಹೋದ!



ಚಿತ್ರಗಳು: ಗಣೇಶ ಆಚಾರ್ಯ

**ರೇಷ್ಮಾ ಶೆಟ್ಟಿ**